ಪತ್ರಿಕೆಗಳು ಬಯಲಾಗಿರುವ ಬಗ್ಗೆಯೂ ಚರ್ಚೆಯಾಗ ಬೇಕಿದೆ. ಇದು ನಿರಂತರವಾಗಿ ಕಳೆದ ಬೇರೆ ಬೇರೆ ಸಂದರ್ಭಗಳಲ್ಲಿ ನಡೆಯುತ್ತಲೇ ಬಂದಿದೆ. ಎಲ್ಲೋ ಒಂದು ಹಂತದಲ್ಲಿ ನಾವು ಇದಕ್ಕೆ ಯಾವುದಾದರೂ ರೀತಿಯಲ್ಲಿ ಇದನ್ನು ಕೊನೆಗಾಣಿಸದಿದ್ದರೆ ಪ್ರಾಯಶಃ ವರ್ಷ ಪ್ರತಿ ಪ್ರಶ್ನೆ ಪತ್ರಿಕೆಗಳು ಬಯಲಾಗುವಂಥದ್ದು, ಒಮ್ಮೆ ಚರ್ಚೆ ಮಾಡುವುದು, ಅದು ಹಾಗೆಯೇ ಹೋಗುವಂಥ ಪರಿಸ್ಥಿತಿಗಳು ಹಿಂದೆ ಆಗಿವೆ.

ಅದಕ್ಕಾಗಿ ಇದರ ಬಗ್ಗೆ ನಾನು ಈಗಾಗಲೇ ಮಾನ್ಯ ಮಂತ್ರಿಗಳಿಗೆ ಹೇಳಿದ್ದೇನೆ. ಇಲ್ಲಿಯವರೆಗೆ ನಡೆದಂತಹ ವಿಚಾರದ ಬಗ್ಗೆ ಸದನದ ಮುಂದೆ ಅವರು ಒಂದು statement ಮಾಡಬೇಕು. ನಾವು ಮತ್ತು ವಿ.ಪಕ್ಷದವರು ಸೇರಿಕೊಂಡು ಇದರ ಬಗ್ಗೆ ಸುದೀರ್ಘವಾದ ಚರ್ಚೆಗಳನ್ನು ಮಾಡಬೇಕು. ಇವತ್ತು latest technology ಬಂದಿರುವಂತಹ ಹಿನ್ನೆಲೆಯಲ್ಲಿ ಮುಂದಿನ ದಿನಗಳಲ್ಲಿ ಈ ರೀತಿ ಆಗದ ಹಾಗೆ ಏನಾದರೂ ಒಂದು ತೀರ್ಮಾನಕ್ಕೆ ಬರಬೇಕೆಂದು ಹೇಳುವಂತಹ ವಿಚಾರ ನಮ್ಮ ಸರ್ಕಾರದ ಮನಸ್ಸಿನಲ್ಲಿ ಇದೆ. ಮಾನ್ಯ ವಿರೋಧ ಪಕ್ಷದ ನಾಯಕರ ಬೇಡಿಕೆಯನ್ನು ನಾನು ಸ್ವಾಗತ ಮಾಡುತ್ತೇನೆ. ನಾವು ಒಂದು ಹೇಳಿಕೆಯನ್ನು ಮಂಡನೆ ಮಾಡುತ್ತೇವೆ. ಆಮೇಲೆ ಇದರ ಬಗ್ಗೆ ಸುದೀರ್ಘವಾಗಿ ಚರ್ಚೆ ಮಾಡಿ. ಸಲಹೆ ಎಲ್ಲಾ ಸ್ವೀಕಾರ ಮಾಡುತ್ತೇವೆ. ಇಷ್ಟರವರೆಗೆ ನಡೆದಂತಹ ವಿದ್ಯಮಾನದ ಬಗ್ಗೆ ಏನು ಮಾಡಬೇಕೆಂದು ಹೇಳುವಂತಹ ವಿಚಾರದಲ್ಲಿ ಕೂಡ ನಿಮ್ಮ ಸಲಹೆಗಳ ಆಧಾರದ ಮೇಲೆ ನಾವು ಮುಂದೆ ಹೋಗುವುದಕ್ಕೆ ತಯಾರಿದ್ದೇವೆ.

(ಆ) ವಿಷಯ : ಅರಣ್ಯಕ್ಕೆ ಬೆಂಕಿ ಬಿದ್ದಿರುವ ಬಗ್ಗೆ.

ಶ್ರೀ ಟಿ.ಬಿ. ಜಯಚಂದ್ರ : ಮಾನ್ಯ ಅಧ್ಯಕ್ಷರೆ, ಎರಡು ಪ್ರಮುಖವಾದ ವಿಚಾರಗಳನ್ನು ಇಲ್ಲಿ ಪ್ರಸ್ತಾಪ ಮಾಡಿ ಸರ್ಕಾರದ ಹೇಳಿಕೆಗಳನ್ನು ಪಡೆಯುವ ಜೊತೆಗೆ ಇಲ್ಲಿ ಚರ್ಚೆ ಮಾಡುವುದಕ್ಕೆ ಅವಕಾಶವನ್ನು ಕೊಡಬೇಕು. ಎರಡನೆಯದಾಗಿ, ನಿಮ್ಮ ಊರಿಗೆ ದಿನಾ ಬೆಂಕಿ ಬೀಳುತ್ತಿದೆ, ರಾಜ್ಯದ ಅರಣ್ಯಕ್ಕೆ ಬೆಂಕಿ ಬೀಳುತ್ತಿದೆಯಲ್ಲ, ಆ ಬೆಂಕಿ ತನ್ನಷ್ಟಕ್ಕೆ ತಾನೇ ಬೀಳುತ್ತಿದೆಯಾ ಅಥವಾ ಯಾರಾದರೂ ಬೆಂಕಿ ಇಡುತ್ತಿದ್ದಾರಾ ಗೊತ್ತಾಗುತ್ತಿಲ್ಲ. ದಯಮಾಡಿ ಅದರ ಬಗ್ಗೆ ಕೂಡ ಒಂದು ಹೇಳಿಕೆಯನ್ನು ಕೊಡಿಸಿ. ಇದರಲ್ಲಿ ಅದೂ ಕೂಡ ಬಹಳ ಪ್ರಮುಖವಾಗಿರುವಂತಹ ವಿಚಾರ.

ಶ್ರೀ ಡಿ.ವಿ. ಸದಾನಂದಗೌಡ : ತಾವು ಹೇಳುತ್ತಿರುವುದು ನಿಜ, ಅದು ಏಕೋ ಏನೋ ಗೊತ್ತಿಲ್ಲ. ತುಂಬಾ ಗಂಭೀರವಾದಂತಹ ವಿಚಾರಗಳು ಇವತ್ತು ರಾಜ್ಯದಲ್ಲಿ ನಡೆಯುತ್ತಿರುವುದನ್ನು ನಾವು ಕಾಣುತ್ತಿದ್ದೇವೆ. ಇದರ ಬಗ್ಗೆ ಇವತ್ತು ಸಾಯಂಕಾಲ Principal CCF, Principal Secretary of Forest Department ಮತ್ತು ಇತರ ಎಲ್ಲಾ ಅಧಿಕಾರಿಗಳ ಸಭೆ ಸಾಯಂಕಾಲ ಏಳೂವರೆಗೆ ಕರೆದಿದ್ದೇನೆ. ಅದಕ್ಕೆ ಸಂಬಂಧಪಟ್ಟ ಮಾಹಿತಿಗಳನ್ನೂ ಕೂಡ ಪಡೆದುಕೊಂಡು ಸದನದ ಮುಂದೆ ಇಡಬೇಕು. ನಾನು ಒಂದು ವಿಚಾರವನ್ನು ಸ್ಪಷ್ಟವಾಗಿ ಹೇಳುವುದಕ್ಕೆ ಇಷ್ಟಪಡುತ್ತೇನೆ. ರಾಜ್ಯದಲ್ಲಿ ನಡೆಯುವಂತಹ ಎಲ್ಲಾ ಜ್ವಲಂತ ವಿದ್ಯಮಾನದ ಬಗ್ಗೆ ಸರ್ಕಾರ ಗಂಭೀರವಾದ ಚಿಂತನೆಗಳನ್ನು ಮಾಡಬೇಕು. ಅದಕ್ಕೆ ಬೇಕಾದ ಮಾಹಿತಿಗಳನ್ನು ಸರ್ಕಾರ ಅಧಿಕಾರಿಗಳಿಂದ ಪಡೆದುಕೊಂಡು ಅದನ್ನು ಸದನದ ಮುಂದೆ ಇಡಬೇಕು. ಸದನದಲ್ಲಿರುವಂತಹ ಮಾನ್ಯ ವಿರೋಧ ಪಕ್ಷದ ನಾಯಕರು ಸೇರಿದಂತೆ ಎಲ್ಲರೂ ಕೂಡ ಇದರ ಬಗ್ಗೆ ಚರ್ಚೆಗಳನ್ನು ಮಾಡಬೇಕು. ಇವತ್ತು ಎರಡು–ಮೂರು ಕಡೆ, ಶಿರಾಡಿಯಲ್ಲಿ, ಬಿಳಿಗಿರಿರಂಗನ ಬೆಟ್ಟದಲ್ಲಿ ಹಾರಂಗಿಯಲ್ಲಿ ಮತ್ತು ಮಲೆಮಹದೇಶ್ವರ ಬೆಟ್ಟದಲ್ಲಿ ತುಂಬ ಆತಂಕಗೊಳಗಾಗಿರುವಂತಹ ಸಂಗತಿಗಳಾಗಿವೆ. ಇದರ ಬಗ್ಗೆ ನಾವು ಏನೋ ಒಂದು ಪರಿಹಾರ ಕಂಡುಕೊಳ್ಳಬೇಕೆಂದರೆ ಒಂದಷ್ಟು ಸೂತ್ರಗಳು ನಮ್ಮ ಮುಂದೆ ಬರಲೇಬೇಕು. ಆ ಸೂತ್ರಗಳು ಬರದಿದ್ದರೆ ಏನೂ ಮಾಡುವುದಕ್ಕೆ ಆಗುವುದಿಲ್ಲ. ಖಂಡಿತವಾಗಿ ತಮ್ಮ ವಿಚಾರದ ಬಗ್ಗೆ ನಾನು ನಾಳೆ ಸದನದಲ್ಲಿ ಒಂದು statement ಮಾಡುತ್ತೇನೆ. ಇದರ ಬಗ್ಗೆ ಚರ್ಚೆಗಳಾಗಬೇಕು ಎನ್ನುವುದು ನನ್ನ ಅಭಿಪ್ರಾಯವಿದೆ.

ಶ್ರೀ ಸಿದ್ದರಾಮಯ್ಯ : ನಾನು ಏನು ಎರಡು ಪ್ರಾಮುಖ್ಯವಾದ ವಿಚಾರಗಳನ್ನು ಪ್ರಸ್ತಾಪ ಮಾಡಿದ್ದೇನೆ, ಅವುಗಳ ಬಗ್ಗೆ statements ಕೊಡುತ್ತೇನೆಂದು ಸರ್ಕಾರ ಹೇಳಿದೆ. ಸರ್ಕಾರ ಅದರ ಬಗ್ಗೆ Statement ಕೊಟ್ಟು, ನಂತರ ಅದರ ಬಗ್ಗೆ clarification ಕೇಳುವ ಹಾಗಿಲ್ಲವೆಂದು ಹೇಳಬಾರದು. ಅದರ ಬಗ್ಗೆ ಇಲ್ಲಿ ಚರ್ಚೆಯಾಗಬೇಕು. ಏಕೆಂದರೆ ಇವು ಬಹಳ ಗಂಭೀರವಾದಂತಹ ವಿಷಯಗಳು. ಇದು ವಿದ್ಯಾರ್ಥಿಗಳಿಗೆ ಸಂಬಂಧಪಟ್ಟಂತಹ ವಿಷಯ. ಇವತ್ತು ವಿದ್ಯಾರ್ಥಿಗಳು ಆತಂಕದಲ್ಲಿದ್ದಾರೆ, ಅವರು ಮಾನಸಿಕ ಒತ್ತಡಕ್ಕೆ ಒಳಗಾಗಿದ್ದಾರೆ. ಇದು ಒಂದು ವಿಚಾರವಾದರೆ,